# ಕಾನನ

ಫೆಬ್ರವರಿ–2026


ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ



© ಶ್ರೀಕಾಂತ್ ಎ. ವಿ.

**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಒ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ

WCG
Wildlife Conservation Group

## ಲೇಖನಗಳು

* ಮೋಡಿವಿದ್ಯೆಯ ಮಹಾನ್ ಚತುರ – ಶ್ರೀಕಾಂತ್ ಎ. ವಿ.

* ಕಾನನ ಕೂಟ – ಕಲಿಕೆಗೆ ಮುಕುಟ – ಸಮತ ಸೀತಾರಾಮ್

* ಕರಿಮತ್ತಿ – ಕೆ. ಪಿ. ಶಂಕರಪ್ಪ
ಶಾಂತಮ್ಮ ಎಸ್.

* ವನಬಂಧ – 09 – ಸುಬ್ಬು ಬಾದಲ್

* ಪರೋಪಕಾರಿ ಹಿಮಕರಡಿ... (ವಿವಿ ಅಂಕಣ) – ಜೈಕುಮಾರ್ ಆರ್.

* ಇರುವೆ (ಕವನ) – ಚನ್ನಕೇಶವ ಜಿ. ಲಾಳನಕಟ್ಟೆ

* ಪ್ರಕೃತಿ ಬಿಂಬ – ಗುರುಪ್ರಸಾದ್ ಕೆ. ಆರ್.
ದೀಪ್ತಿ ಎನ್.



ಮುಖಪುಟ ಛಾಯಾಚಿತ್ರ
ಗಿಡುಗ–ಹದ್ದು

ಮುಖಪುಟ
ಪ್ರವೀಣ್ ಎಸ್.

ವಿನ್ಯಾಸ
ಧನರಾಜ್ ಎಂ.

© ಗುರುಪ್ರಸಾದ್ ಕೆ. ಆರ್.




# ಮೋಡಿವಿದ್ಯೆಯ ಮಹಾನ್ ಚತುರ

**(ಕಾನನ ಸಿರಿ ಲೇಖನ ಸ್ಪರ್ಧಾ ವಿಜೇತ ಲೇಖನ)**

ಇನ್ನೊಬ್ಬರ ಮನಸ್ಸನ್ನು ವಶೀಕರಣಗೊಳಿಸಿ, ಮೋಡಿ ಮಾಡಿ ತಮ್ಮ ಕಾರ್ಯಸಾಧನೆಗೋಸ್ಕರ ಬಳಸಿಕೊಂಡು ಅಪರಾಧ ಕೃತ್ಯಗಳನ್ನು ಮಾಡಿಸುವ ಮನೋವೈಜ್ಞಾನಿಕ ಕಥಾಹಂದರ ಹೊಂದಿರುವಂತಹ ಅನೇಕ ಕಾದಂಬರಿಗಳು, ಚಲನಚಿತ್ರಗಳ ಬಗ್ಗೆ ನಿಮಗೆ ತಿಳಿದೇ ಇರುತ್ತದೆ. ಅಂತಹ ಯಾವುದೇ ಚಿತ್ರಕಥೆಗೂ ಕಡಿಮೆ ಇಲ್ಲದ ಜೀವಲೋಕದ ಅಚ್ಚರಿಯ ಕಥೆಯೊಂದನ್ನು ನಿಮ್ಮ ಮುಂದಿಡುತ್ತಿದ್ದೇನೆ. ಈ ಕಥೆಯಲ್ಲಿ ಬರುವ ಯಾವುದೇ ಜೀವಿ ಅಥವಾ ಸನ್ನಿವೇಶಗಳು ಕಾಲ್ಪನಿಕವಲ್ಲ ಎಂಬ ಡಿಸ್ ಕ್ಲೈಮರ್ ನೊಂದಿಗೆ ಈ ಕಥೆ ಆರಂಭಿಸುತ್ತಿದ್ದೇನೆ.

ಕ್ರಿಸ್ತಪೂರ್ವ 333 ರಲ್ಲಿ ಮಹಾಯೋಧ ಅಲೆಗ್ಸಾಂಡರನು ಫ್ರಿಗಿಯಾದ ರಾಜಧಾನಿ ಗೋರ್ಡಿಯಮ್ ಗೆ ಬಂದಾಗ ಆ ಸಂಸ್ಥಾನವನ್ನು ಕಟ್ಟಿದ ಗೋರ್ಡಿಯಸ್ಸನ ರಥವೊಂದನ್ನು ತೋರಿಸಲಾಗುತ್ತದೆ. ಆ ರಥದ ನೊಗವನ್ನು ಬ್ರಹ್ಮಗಂಟಿನಷ್ಟು ಕ್ಲಿಷ್ಟಕರವಾಗಿ ಒಂದು ಕಂಬಕ್ಕೆ ಬೆಸೆಯಲಾಗಿರುತ್ತದೆ. ಆ ಗಂಟನ್ನು ಬಿಡಿಸಿ ರಥವನ್ನು ಮುಕ್ತಗೊಳಿಸುವ ವೀರನು ಮುಂದೆ ಇಡೀ ಏಷ್ಯಾ ಖಂಡವನ್ನು ಆಳುತ್ತಾನೆ ಎಂಬ ಮಹತ್ತರ ನಂಬಿಕೆಯನ್ನು ಅರಿತ

ಅಲೆಗ್ಸಾಂಡರನು ತನ್ನ ಹರಿತವಾದ ಕತ್ತಿಯಿಂದ ಅದನ್ನು ತುಂಡರಿಸುತ್ತಾನೆ. ಆ ನಂತರದ ಅವನ ದಿಗ್ವಿಜಯದ ದಂಡಯಾತ್ರೆಯು ಹೇಗೆ ಸಾಗಿತೆಂಬುದು ತಿಳಿದ ವಿಚಾರ. ಇದರ ಆಧಾರದಲ್ಲೇ "Cutting the Gordian Knot" ಎಂಬ ನಾಣ್ಣುಡಿ ಚಾಲ್ತಿಗೆ ಬಂದದ್ದು. ಇಂತಹ ಗೋರ್ಡಿಯನ್ ಕ್ನೋಟ್ (Gordian knot) ನ್ನೇ ಹೋಲುವ ಈ ಕ್ರಿಮಿಯನ್ನೂ ಸಹ ಗೋರ್ಡಿಯನ್ ವರ್ಮ್ (Gordian Worm) ಎಂದು ಕರೆಯುತ್ತಾರೆ. ಇದು ಅಂತಿಂತಾ ಕ್ರಿಮಿಯಲ್ಲ. ಬೇರೊಬ್ಬರ ಮನಸ್ಸನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಮೋಡಿ ಮಾಡಿ ತನ್ನ ಸ್ವಾರ್ಥಕ್ಕಾಗಿ ಅವರನ್ನು ಆತ್ಮಹತ್ಯೆಗೆ ದೂಡಿ ಬಿಡುವಂತಹ ಮಹಾನ್ ಚತುರ ಕ್ರಿಮಿ.




ನೇಮಟೋಮೋರಿಫಾ (Nematomorpha) ಎಂದು ವೈಜ್ಞಾನಿಕವಾಗಿ ಕರೆಯಲ್ಪಡುವ ಈ ಕಿರಾತಕ ಕ್ರಿಮಿಯನ್ನು ಕುದುರೆ ಜೂಲಿನ ಹುಳು (Horse hair worm or hairsnake) ಎಂದೂ ಕರೆಯುತ್ತಾರೆ. ನೀರನ್ನು ತಾಕಿದ ಕುದುರೆ ಬಾಲದ ಕೂದಲು ಕ್ರಿಮಿಯಾಗಿ ಬದಲಾಗುತ್ತದೆ ಎಂಬ ಹಿಂದಿನ ಕಾಲದ ಪ್ರತೀತಿಯಿಂದ ಈ ಹೆಸರು ಬಂದಿರಬಹುದು. ಗಾತ್ರದಲ್ಲಿಯೂ ಸಹ ಕುದುರೆ ಬಾಲದ ಕೂದಲಿನಷ್ಟೇ ತೆಳುವಾಗಿರುತ್ತದೆ. ನೀರಿನಲ್ಲಿರುವ ಇದರ ಮೊಟ್ಟೆಗಳೊಡೆದು ಹೊರಬಂದ ಮರಿಗಳು ಈಜಲೂ ಸಹ ವಿಪರೀತ ಸೋಂಬೇರಿಗಳಾಗಿರುತ್ತವೆ. ನೀರಿನಲ್ಲೇ ಬಾಲ್ಯಾವಸ್ಥೆ ಕಳೆಯುವ ಚಿಮ್ಮಂಡೆ (Cricket) ಅಥವಾ ಇನ್ನಿತರ ಕೀಟಗಳಿಗೆ ಆಹಾರವಾಗಲು ಇವು ಹವಣಿಸುತ್ತಿರುತ್ತವೆ. ಆಶ್ಚರ್ಯವಾಗುತ್ತಿದೆಯೇ??? ಆದರೂ ಇದೇ ಸತ್ಯ…ಈ ಹಂತದಲ್ಲಿಯೇ ಈ ಕ್ರಿಮಿಯ ಕೌತುಕ ಜೀವನ ಶೈಲಿಯು ಆರಂಭವಾಗುವುದು.

ಚಿಮ್ಮಂಡೆಯ ಮರಿಗಳು ಈ ಕ್ರಿಮಿಯ ಮರಿಗಳನ್ನು ಭಕ್ಷಿಸಿ ಬೆಳೆದು ವಯಸ್ಕರಾಗಿ ರೂಪಾಂತರಗೊಳ್ಳುತ್ತವೆ. ಅದರ ಹೊಟ್ಟೆ ಸೇರಿದ ಕುದುರೆ ಜೂಲಿನ ಹುಳು ಕೂಡ ತನ್ನ ಪ್ರೌಢಾವಸ್ಥೆಯನ್ನು ತಲುಪುತ್ತದೆ. ಇನ್ನಷ್ಟು ಬೆಳೆದು ರೂಪಾಂತರಗೊಂಡ ಚಿಮ್ಮಂಡೆಯು ನೀರಿಂದ ಹಾರಿ ತನ್ನ ಬದುಕಿನ ಉಳಿದ ಭಾಗವನ್ನು ಗಾಳಿಯಲ್ಲಿ ಕಳೆಯುತ್ತದೆ. ತನ್ನೊಳಗೆ ಮತ್ತೊಂದು ಜೀವಿಯ ಇರುವಿಕೆಯ ಅರಿವೇ ಇಲ್ಲದ ಚಿಮ್ಮಂಡೆಯು ಹೆರಿಗೆಯೇ ಆಗದ ಗರ್ಭಿಣಿಯಂತೆ ಅಲೆಯುತ್ತದೆ. ಚಿಮ್ಮಂಡೆಯ ದೇಹದೊಳಗೆ ಈ ಕ್ರಿಮಿಯು ಸುಮಾರು ಒಂದಡಿ ಬೆಳೆದು ಗೋರ್ಡಿಯನ್ ಕ್ನೋಟ್ (Gordian knot) ನ ಹಾಗೆ ಉದ್ದನೆಯ ದೇಹವನ್ನು ಗಂಟು ಸುತ್ತಿಕೊಂಡು ತನ್ನ ದೇಹದ ಮೇಲ್ಮೈಯಿಂದಲೇ ತನಗೆ ಬೇಕಾದ ಆಹಾರವೆಲ್ಲವನ್ನೂ

ಚಿಮ್ಮಂಡೆಯ ದೇಹದಿಂದ ಹೀರಿಕೊಳ್ಳುತ್ತ ಚೆನ್ನಾಗಿ ತಿಂದುಂಡು ಬೆಳೆಯುತ್ತದೆ. ಎಷ್ಟೇ ಉಂಡರೂ ಉದ್ದವಾಗಿ ಬೆಳೆಯುತ್ತವೆಯೇ ಹೊರತು ಬೊಜ್ಜು ಬೆಳೆಸಿ ದಪ್ಪ ಆಗುವುದಿಲ್ಲ. ಕೆಲವೊಮ್ಮೆ ಇವು ಆರು ಮುಕ್ಕಾಲು ಅಡಿಗಳವರೆಗೂ ಬೆಳೆಯಬಲ್ಲವು.

ಚಿಮ್ಮಂಡೆಗಳು ಚಿರ್ ಚಿರ್ ಎಂದು ಸದ್ದು ಮಾಡುವುದು ಸಹಜ. ಕೆಲವೊಮ್ಮೆ ಈ ಸದ್ದಿನಿಂದಲೇ ಇವುಗಳನ್ನು ಗುರುತಿಸಿ ಕಪ್ಪೆ, ಓತಿ, ಹಲ್ಲಿ, ಪಕ್ಷಿಗಳು ಇವನ್ನು ಹಿಡಿದು ಕೊಂದು ತಿನ್ನುತ್ತವೆ. ಚಿಮ್ಮಂಡೆ ಸತ್ತರೆ ಅದರಳೊಗೆ ಬೆಚ್ಚಗೆ ಅವಿತಿರುವ ತಾನೂ ಸತ್ತಂತೆ ಎಂದು ಅರಿತಿರುವ ಕುದುರೆ ಜೂಲಿನ ಹುಳು ತನ್ನ ಮೋಡಿ ವಿದ್ಯೆಯ ಮೊದಲ ಪ್ರಯೋಗ ಆರಂಭಿಸುವುದೇ ಈ ಹಂತದಲ್ಲಿ. ಚಿಮ್ಮಂಡೆ ಶಬ್ದ ಮಾಡಿದರೆ ತಾನೇ ಭಕ್ಷಕ ಪ್ರಾಣಿಗಳಿಗೆ ಪತ್ತೆಯಾಗುವುದು? ಚಿಮ್ಮಂಡೆಯ ಮೆದುಳನ್ನು ತನ್ನ ವಶಕ್ಕೆ ಪಡೆದು ಅದು ಸದ್ದೇ ಮಾಡದಿರುವಂತೆ ನೋಡಿಕೊಳ್ಳುತ್ತದೆ ಮೋಡಿ ವಿದ್ಯೆಯ ಮಹಾನ್ ಚತುರ ಈ ಕುದುರೆ ಜೂಲಿನ ಹುಳು.

ಯೌವ್ವನಕ್ಕೆ ಬಂದಾಗ ಈ ಕ್ರಿಮಿಗೆ ತಾನು ಸಂಸಾರಸ್ಥನಾಗಲು ಮತ್ತೆ ನೀರು ತಲುಪಬೇಕು ಎಂದು ಜ್ಞಾನೋದಯವಾಗುತ್ತದೆ. ಆದರೆ ಈ ಕ್ರಿಮಿಗೆ ತನ್ನ ದೇಹವನ್ನೇ ಅರಮನೆ ಮಾಡಿ ಆಶ್ರಯ ಕೊಟ್ಟಿರುವ ಚಿಮ್ಮಂಡೆಗಳಿಗೂ ನೀರಿಗೂ ಆಗಿ ಬರುವುದಿಲ್ಲ. ಚಿಮ್ಮಂಡೆಗಳನ್ನು ಕೈಯಲ್ಲಿ ಹಿಡಿದು ಬಲವಂತವಾಗಿ ನೀರಿಗೆಸೆದರೂ ಕಾಲು ನೀರಿಗೆ ಸೋಕಿದೊಡನೆ ಚಂಗನೆ ಹಾರಿಬಿಡುತ್ತವೆ. ಈಗ ಆ ಕ್ರಿಮಿಯ ಚಾಣಾಕ್ಷತೆ ಮತ್ತೊಮ್ಮೆ ಹೊರಗೆ ಬರುತ್ತದೆ. ಈ ಹಂತದಲ್ಲಿ ಕ್ರಿಮಿಯು ಚಿಮ್ಮಂಡೆಯ ಮಿದುಳಿನ ಸಂವೇದನಾಶಕ್ತಿಯನ್ನು ತಲೆಕೆಳಗು ಮಾಡುವಂತಹ ನರಪ್ರೇಕ್ಷಕ ರಸಾಯನಿಕವನ್ನು (Neuritransmitter) ಸ್ರವಿಸುತ್ತದೆ. ಈ ಸ್ರವಿಕೆಯು ಹುಳುವಿನ ಮಿದುಳಿಗೆ ತಲುಪಿ ಅದನ್ನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದಿಸುತ್ತದೆ. ಈ ಪ್ರಚೋದನೆಯಿಂದ ಚಿಮ್ಮಂಡೆಯು ಪ್ರಾಣತ್ಯಾಗ ಮಾಡಲು ನೀರಿಗೆ ಹಾರುತ್ತದೆ. ಅಷ್ಟೇ ಅಲ್ಲದೆ, ನೀರಿಗೆ ಬಿದ್ದ ಮೇಲೂ ಸಹ ತಾನೊಬ್ಬ ನುರಿತ ಈಜುಪಟು ಎಂಬ ಭ್ರಮೆಗೆ ಒಳಗಾಗಿ ತನ್ನ ಕೈಕಾಲು ಆಡಿಸುತ್ತ ನೀರಿನ ಆಳಕ್ಕೆ ಮುಳುಗುತ್ತದೆ. ಈ ಅವಕಾಶವನ್ನು ಸೃಷ್ಟಿಸಿಕೊಂಡ ಕ್ರಿಮಿ ಹುಳುವಿನ ಮೈಯಲ್ಲಿ ತೂತು ಕೊರೆದು ನೀರಿಗೆ ತಲುಪುತ್ತದೆ. ತನ್ನ ಸಂಗಾತಿಯನ್ನು ತಲುಪುವ ಏಕೈಕ ಕಾರಣಕ್ಕೆ ತನ್ನನ್ನು ಅನ್ನ ಹಾಕಿ, ಸೂರು ನೀಡಿ ಸಲಹಿದ ಅಮಾಯಕ ಹುಳುವೊಂದನ್ನು ಬಲಿಕೊಟ್ಟು "ಉಂಡ ಮನೆಗೆ ಎರಡು ಬಗೆಯುತ್ತದೆ". ಆದರೆ ಎಲ್ಲವೂ ಸೃಷ್ಟಿಯ ನಿಯಮ. ಇಲ್ಲಿ ತಪ್ಪು ಸರಿಗಳ ಲೆಕ್ಕಾಚಾರವೇ ನಿರರ್ಥಕ.

ಇದೇ ರೀತಿಯಲ್ಲಿ ನೀರು ತಲುಪಿದ ಹೆಣ್ಣೊಂದರೊಡನೆ ಮಿಲನದಲ್ಲಿ ಪಾಲ್ಗೊಳ್ಳುವ ಗಂಡು ತನ್ನೆಲ್ಲಾ ವೀರ್ಯಾಣುಗಳನ್ನು ಸ್ರವಿಸಿ ತಾನು ಭೂಮಿ ಮೇಲೆ ಬಂದ ಏಕಮಾತ್ರ ಉದ್ದೇಶವನ್ನು ಪೂರ್ಣಗೊಳಿಸಿ ಕೂಡಲೇ ಪ್ರಾಣ ಬಿಡುತ್ತದೆ. ಹೆಣ್ಣು ಸುಮಾರು ಒಂದೂವರೆ ಕೋಟಿ ಚಿಕ್ಕ ಚಿಕ್ಕ ಮೊಟ್ಟೆಗಳನ್ನು ನೀರಿನಲ್ಲಿ ತೇಲುವ ಕಡ್ಡಿಯ ಕೆಳಭಾಗಕ್ಕೋ ಅಥವಾ ಕಲ್ಲಿಗೋ ಅಂಟಿಸಿಬಿಡುತ್ತದೆ. ಆ ಒಂದೂವರೆ ಕೋಟಿಯಷ್ಟು ಮರಿಗಳು ಹೊರಬಂದು ಅವುಗಳ ಲಾಲನೆ ಪಾಲನೆ, ಹಾರ್ಲಿಕ್ಸ್-ಬೂಸ್ಟ್, ಸ್ಕೂಲು-ಫೀಸು, ಮದುವೆ-ಮುಂಜಿಯ

ಸಹವಾಸವೇ ಬೇಡವೆಂದು ಅವು ಹೊರಬರುವ ಮುನ್ನವೇ ಹೆಣ್ಣು ಕೂಡ ಅಸುನೀಗಿ ನೀರೊಳಗೆ ದೊಡ್ಡ ಅನಾಥಾಶ್ರಮವನ್ನೇ ಸೃಷ್ಟಿಸಿ ಬಿಡುತ್ತದೆ. ಹದಿನೈದು ದಿನಗಳ ನಂತರ ಹೊರಬರುವ ಮರಿಗಳ ಪೈಕಿ ಬೆರಳೆಣಿಕೆಯಷ್ಟು ಮಾತ್ರ ಜೀವನ ಚಕ್ರವನ್ನು ಮುಂದುವರಿಸಬಲ್ಲವು.

ಕಂಡೋರ ಮದುವೇಲಿ ಉಂಡೋನೆ ಜಾಣ ಎಂಬ ಗಾದೆಯಂತೆ ಪರಾವಲಂಬಿಯಾಗಿ ಬದುಕಿ ಬೇರೆಯವರ ಬೆವರ ಫಲವನ್ನು ಉಂಡು ಬಾಳುವುದು ಈ Gordian Worm ನ ಸೌಭಾಗ್ಯವಾದರೆ, ತನ್ನದೇ ಆದ ಯಾವುದೇ ಕಾರಣವಿಲ್ಲದಿದ್ದರೂ ಆತ್ಮಹತ್ಯೆ ಮಾಡಿಕೊಳ್ಳಬೇಕಾದ್ದು ಚಿಮ್ಮಂಡೆಯಂತಹ ಕೀಟದ ದೌರ್ಭಾಗ್ಯ.




ಲೇಖನ: ಶ್ರೀಕಾಂತ್ ಎ. ವಿ.
ಶಿವಮೊಗ್ಗ ಜಿಲ್ಲೆ




# ಕಾನನ ಕೂಟ – ಕಲಿಕೆಗೆ ಮುಕುಟ

ಒಂದು ವಾರದ ಹಿಂದೆ ಮಗನೊಂದಿಗೆ ಲಾಲ್‌ಬಾಗ್ ಪುಷ್ಪಾಲಂಕಾರದ ವಿಸ್ಮಯ ಲೋಕವನ್ನು ಕಂಡ ನಮಗೆ, ಜನವರಿ 26ರಂದು ನಡೆದ ಕಾನನ ಕೂಟಕ್ಕೆ ಕಾಲಿಟ್ಟ ತಕ್ಷಣವೇ ಅದೇ ವಿಸ್ಮಯ ಜಗತ್ತಿನ ಒಡೆಯರಾದ ಪೂರ್ಣಚಂದ್ರ ತೇಜಸ್ವಿಯವರ ಭಾವಚಿತ್ರ ಕಣ್ಣಿಗೆ ಬಿತ್ತು. ಅವರ ಭಾವಚಿತ್ರದಂತೆಯೇ ಸಭಾಂಗಣವೂ ಕೂಡ ಸಕಾರಾತ್ಮಕತೆ ಮತ್ತು ಪ್ರಸನ್ನ ವಾತಾವರಣದಿಂದ ತುಂಬಿಕೊಂಡಿತ್ತು. ಅಲ್ಲಿ ನೆರೆದವರೆಲ್ಲರೂ ತೇಜಸ್ವಿಯವರ ಪರಿಪಾಲಕರಾಗಿರುವಾಗ, ಅಂಥ ವಾತಾವರಣ ಸಹಜವೆನಿಸಿತು.

ಇದು ನನಗೆ ಮೊದಲ ಕಾನನ ಕೂಟ. ಪ್ರಕೃತಿ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ಸಂಬಂಧಿಸಿದ ಹಲವು ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೂ, ಈ ಸಮಾರಂಭ ಹೇಗೆ ನಡೆಯಲಿದೆ ಎಂಬ ಕುತೂಹಲ ನನ್ನ ಮನಸ್ಸಿನಲ್ಲಿ ಮನೆಮಾಡಿತ್ತು. ಅಲ್ಲಿ ನನಗೆ ಕಂಡದ್ದು ಯಾವುದೇ ಆಡಂಬರವಿಲ್ಲದ, ಅತ್ಯಂತ ಸರಳವಾಗಿ ಸಿದ್ಧಪಡಿಸಿದ್ದ ಸಭಾಂಗಣ. ಸೇರಿದ್ದ ಎಲ್ಲರಲ್ಲೂ ಸಹಜವಾದ ಮಂದಹಾಸ, ಸರಳತೆ ಮತ್ತು ಸೌಹಾರ್ದತೆ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಆದರೆ ನನ್ನ ಮನಸ್ಸಿನಲ್ಲಿ ಮಾತ್ರ ಒಂದು ಪ್ರಶ್ನೆ ಉದಯಿಸಿತು. ಯಾವುದೇ ದೀಪಸ್ತಂಭವಿಲ್ಲದೆ ಈ ಕಾರ್ಯಕ್ರಮ ಹೇಗೆ ಉದ್ಘಾಟನೆಗೊಳ್ಳುವುದು ಎಂದು.

ತಡವಿಲ್ಲದೆ ಶುರುವಾದ ಕಾರ್ಯಕ್ರಮ ನನ್ನ ಪ್ರಶ್ನೆಗೆ ಉತ್ತರವಾಯಿತು. ಎಲ್ಲರಂತೆ ದೀಪ ಹಚ್ಚುವ ಬದಲು, ಗಿಡಕ್ಕೆ ನೀರನ್ನು ಎರೆಯುವ ಮೂಲಕ ಉದ್ಘಾಟಿಸಿದರು. ದೀಪದಿಂದ ಹೊರಬರುವ ಕಾರ್ಬನ್ ಸಹ ಪರಿಸರಕ್ಕೆ ಬೇಡವೆಂಬ ಕಾಳಜಿ ಕಾರ್ಯಗತಗೊಂಡಿದೆ ಎನಿಸಿತು.

ಇಷ್ಟಲ್ಲದೆ, ಅನಿವಾರ್ಯ ಸಂದರ್ಭಗಳಲ್ಲಿ ಪ್ರಕೃತಿಪರರೂ ಸಹ ಪ್ಲಾಸ್ಟಿಕ್ ವಸ್ತುಗಳನ್ನು ಬಳಸುವ ಪರಿಸ್ಥಿತಿಯನ್ನು ಕಾಣಬಹುದು. ಆದರೆ ಕಾನನ ಕೂಟ ಸಮಾರಂಭದಲ್ಲಿ ಮಾಡಿದ ತಯಾರಿ ನಿಜಕ್ಕೂ ನಿದರ್ಶನವಾಗಿತ್ತು. ಧನರಾಜ್ ಎಂ. ಮತ್ತು ಸುನಿಲ್ ಆರ್. ಅವರ "ಸಾಮಾನ್ಯ ಹಾವುಗಳು" ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ, ಪುಸ್ತಕಗಳನ್ನು ಪ್ಲಾಸ್ಟಿಕ್ ಗಿಫ್ಟ್ ಪೇಪರ್ ಬದಲು ಬಾಳೆಎಲೆಯಲ್ಲಿ ಅಂದವಾಗಿ ಹೊದಿಸಿದ್ದು, ಪ್ಲಾಸ್ಟಿಕ್ ಟ್ರೇ ಬದಲು ಹೂಗಳಿಂದ ಅಲಂಕರಿಸಿದ ಬಿದಿರಿನ ಬುಟ್ಟಿಯೊಳಗೆ ಪುಸ್ತಕವನ್ನು ಇಟ್ಟದ್ದು, ಬರಹಗಾರರ ಸನ್ಮಾನಕ್ಕೆ ಹಣ್ಣುಗಳ ಪ್ಲಾಸ್ಟಿಕ್ ಬಾಸ್ಕೆಟ್ ಬದಲು ಇಕೋ-ಫ್ರೆಂಡ್ಲಿ ಚೀಲಗಳನ್ನು ನೀಡಿದ್ದು ಗಮನಾರ್ಹವಾಗಿತ್ತು.




ಈ ಎಲ್ಲಾ ಕಾರ್ಯಗಳು ಸೃಜನಶೀಲತೆಯ ಜೊತೆಗೆ ಅವರು ಪರಿಸರದ ಬಗ್ಗೆ ಹೊಂದಿರುವ ಕಾಳಜಿಯನ್ನು ಸ್ಪಷ್ಟವಾಗಿ ತೋರಿಸಿತು. ಜೊತೆಗೆ, ನಮ್ಮ ನಾಡಿನ ಸಂಸ್ಕೃತಿಯನ್ನು ಕೂಡ ಎತ್ತಿ ಹಿಡಿದಂತಿತ್ತು.

ಈ ಎಲ್ಲವೂ ನನ್ನ ಪುಟ್ಟ ಮಗನಿಗೆ ಒಳ್ಳೆಯ ನಿದರ್ಶನವನ್ನು ನೀಡಿತಲ್ಲ ಎಂಬ ಸಮಾಧಾನ ನನ್ನೊಳಗೆ ಮೂಡಿತು. ಒಟ್ಟಾರೆ, ವೈಲ್ಡ್‌ಲೈಫ್ ಕನ್ಸರ್ವೇಶನ್ ಗ್ರೂಪ್(WCG) ಕೇವಲ ಪ್ರಕೃತಿ ಮತ್ತು ವನ್ಯಜೀವಿ ಸಂರಕ್ಷಣೆಯ ವೇದಿಕೆಯಷ್ಟೇ ಅಲ್ಲ, ಅಕ್ಷರಶಃ ಆ ಮೌಲ್ಯಗಳ ನಿಜವಾದ ಪರಿಪಾಲಕರಿವರು ಎಂಬ ಭಾವನೆ ನನ್ನ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಯೂರಿತು.

ಇಷ್ಟೊಂದು ವಿಭಿನ್ನ ರೀತಿಯ ಪಾಠಗಳನ್ನು ನೀಡಿದ ಈ ಕೂಟದಲ್ಲಿ, ಉಪಸ್ಥಿತರಿದ್ದ ಅತಿಥಿ ಹಾಗೂ ಸ್ನೇಹಿತರಿಂದ ದೊರೆತ ಅರಿವಿಗೆ ನಾನು ಶರಣಾದೆ.

ಅತಿಥಿಗಳಾದ ಶ್ರೀ ವಸಂತಕುಮಾರ್ ಅವರು ಲೇಖಕರಿಗೆ ಪರಿಸರ ವೀಕ್ಷಣೆಯ ಮಹತ್ವವನ್ನು ವಿವರಿಸಿದ ರೀತಿ, ಶ್ರೀಮತಿ ಜಯಶ್ರೀ ರವರು ಪರಿಸರ ಮತ್ತು ವನ್ಯಜೀವಿಗಳ ಕುರಿತ ಕಾರ್ಯಾಗಾರಗಳು ಕೇವಲ ಬೇಸಿಗೆ ಶಿಬಿರಗಳಿಗಷ್ಟೇ ಸೀಮಿತವಾಗದೇ, ಪ್ರತಿಯೊಂದು ಶಾಲೆಯ ಮಕ್ಕಳಿಗೂ ತಲುಪಬೇಕೆಂಬ ಮಹತ್ವವನ್ನು ವಿವರಿಸುತ್ತ ಅದಕ್ಕಾಗಿ ತಮ್ಮ ಸಂಪೂರ್ಣ ಸಹಕಾರವಿರುತ್ತದೆ ಎಂಬ ನಿರ್ಧಾರ ಎಲ್ಲವೂ ಮನಮುಟ್ಟಿದ್ದವು.

ಮುಖ್ಯ ಅತಿಥಿಗಳಾದ ಶ್ರೀಮತಿ ದೀಪಾ ರವರು ನೀಡಿದ ಅನೇಕ ಬರವಣಿಗೆಗೆ ಸಂಬಂಧಿತ ಮಾಹಿತಿಗಳು ಮತ್ತು ಸಲಹೆಗಳು, ಪ್ರಶಸ್ತಿ ಗೆಲ್ಲುವುದಷ್ಟೇ ಅಲ್ಲದೆ ಬರಹವು ನಿರಂತರವಾಗಿ ಸಾಗಬೇಕು, ಅದಕ್ಕಾಗಿ ಬರಹಗಾರರು ನಿರ್ದಿಷ್ಟ ಸಮಯವನ್ನು ಬರವಣಿಗೆಗೆ ಮೀಸಲಿಡಬೇಕು ಎಂಬ ಮಾರ್ಗದರ್ಶನ, ಇವೆಲ್ಲವೂ ನನ್ನ ಮನಸ್ಸಿನಲ್ಲಿ ಆಳವಾಗಿ ಬೇರೂರಿ, ಬರವಣಿಗೆಯತ್ತವೂ ಪ್ರಕೃತಿ ಸಂರಕ್ಷಣೆಯ ಕಾರ್ಯದತ್ತವೂ ಹೊಸ ಸ್ಫೂರ್ತಿಯನ್ನು ನೀಡಿದವು.




ಈ ಎಲ್ಲದರ ನಡುವೆ, ಕಾನನ ಲೇಖನ ಸ್ಪರ್ಧೆಯ ಪ್ರಶಸ್ತಿ ತೀರ್ಮಾನವು ಯಾವುದೇ ಪಕ್ಷಪಾತವಿಲ್ಲದೆ, ಪ್ರಾಮಾಣಿಕವಾಗಿ ಲೇಖನಗಳ ಮೌಲ್ಯದ ಆಧಾರದ ಮೇಲೆ ಮಾಡಲಾಗಿದೆ ಎಂದು ತಿಳಿಸಿದಾಗ, ಮೊದಲ ಬಾರಿಗೆ ನಾನು ಕನ್ನಡದಲ್ಲಿ ಲೇಖನ ಬರೆದು 'ಉತ್ತಮ ಲೇಖನ' ಪ್ರಶಸ್ತಿಯನ್ನು ಪಡೆದ ಕ್ಷಣದ ಹೆಮ್ಮೆಯ ಭಾವನೆ ನನ್ನೊಳಗೆ ಅನಿರ್ವಚನೀಯ ಸಂತೋಷವನ್ನು ತುಂಬಿತು.

ಈ ಪುಟ್ಟ ಹೆಮ್ಮೆ ಮತ್ತು ಸಂತೋಷದ ನಡುವೆಯೇ, ಪ್ರಶಸ್ತಿ ವಿಜೇತರ ಮಾತುಗಳನ್ನು ಕೇಳುತ್ತಿದ್ದ ನನಗೆ ಕೆ. ಎಸ್. ಶ್ರೀನಿವಾಸ್ ಅವರ ಮಾತುಗಳು ರಪ್ಪನೆ ಬಡಿದೆಚ್ಚರಿಸಿತು. ಛಾಯಾಗ್ರಹಣ ಕ್ಷೇತ್ರದಲ್ಲಿ 20ಕ್ಕೂ ಹೆಚ್ಚು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು, ಕರ್ನಾಟಕ ಸರ್ಕಾರದ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳನ್ನು ಪಡೆದಿದ್ದರೂ, ತಮ್ಮ ಬರವಣಿಗೆಯ ಮೊದಲ ಪ್ರಶಸ್ತಿಯನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿ, "ಇದು ಬರವಣಿಗೆಯಲ್ಲಿನ ನನ್ನ ಮೊದಲ ಪ್ರಶಸ್ತಿ" ಎಂದು ಹೇಳಿದಾಗ ಎಷ್ಟೇ ಬೆಳೆದರೂ ಹೃದಯ ಸರಳತೆ ಮತ್ತು ವಿನಯದ ಮಹತ್ವ, ಎಷ್ಟೇ ಕಲಿತರೂ, ಇನ್ನೂ ಕಲಿಯಲು ಅವಕಾಶವಿದೆ ಎಂಬುದಕ್ಕೆ ಅವರು ಜೀವಂತ ನಿದರ್ಶನವಾಗಿ ಕಾಣಿಸಿದರು.

**ಅ ಕ್ಷಣದಲ್ಲಿ ಕುವೆಂಪು ಅವರ ಸಾಲುಗಳು ಎಷ್ಟೋ ನಿಜವೆಂದೆನಿಸಿತು.**

ಯಾವುದಕ್ಕೂ ಮೊದಲಿಲ್ಲ
ಯಾವುದಕ್ಕೂ ತುದಿಯಿಲ್ಲ
ಯಾವುದೂ ಎಲ್ಲಿಯೂ ನಿಲ್ಲುವುದಿಲ್ಲ
ಕೊನೆ ಮುಟ್ಟುವುದು ಇಲ್ಲ

ಈ ಸಾಲುಗಳ ಅರ್ಥ ನನ್ನೊಳಗೆ ಇನ್ನಷ್ಟು ಆಳವಾಗಿ ಅರ್ಥವಾಯಿತು.

ಹೀಗೆ, ನನಗೆ ಮತ್ತು ನನ್ನ ಪುಟ್ಟ ಮಗನಿಗೆ ಕಾನನ ಕೂಟ ನಿಜವಾಗಿಯೂ ಕಲಿಕೆಯ ಮುಕುಟವಾಯಿತು.

ನೀವು ಸಹ ಇದನ್ನು ಒಪ್ಪುತ್ತೀರಲ್ಲವೇ?






## ಕಾನನ ಪತ್ರಿಕೆಯ ವಿಶೇಷ ಕೊಡುಗೆದಾರರು

### ಕೃಷ್ಣ ನಾಯಕ್

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲಿನ ಒಂದು ಪುಟ್ಟ ಹಳ್ಳಿಯವರಾದ ಇವರು ಹವ್ಯಾಸಿ ಬರಹಗಾರರರು. ಬಿ. ಎಸ್ಸಿ ಪದವೀದರರಾದ ಇವರಿಗೆ ಹುಟ್ಟಿನಂದಿಲಿಂದಲೂ ಪ್ರಾಣಿ, ಪಕ್ಷಿ, ಕ್ರಿಮಿ-ಕೀಟಗಳಲ್ಲಿ ವಿಶೇಷ ಪ್ರೀತಿ. 2011ರ '**ಹಸು ಕಂದನ ಮರಣ**' ಎಂಬ ಕವನದಿಂದ ಶುರುವಾದ ಇವರ ಕಾನನ ಪತ್ರಿಕೆಯ ಒಡನಾಟವು ಇಲ್ಲಿನ ತನಕ ಸರಾಗವಾಗಿ ನಡೆದು ಬಂದಿರುತ್ತದೆ. 2011 ರಿಂದ ಇವರು ಕಾನನ ಪತ್ರಿಕೆಗೆ ಸುಮಾರು 36 ಕವನಗಳನ್ನು ನೀಡಿದ್ದಾರೆ. ಇವರ ಈ ನಿಸ್ವಾರ್ಥ ಸೇವೆಗೆ, ದಶಕಗಳಿಂದ ಕಾನನ ಮಾಸ ಪತ್ರಿಕೆಗೆ ನೀಡಿರುವ ಅಪಾರ ಸಹಕಾರಕ್ಕೆ ಇವರನ್ನು ತಂಡವು **ವಿಶೇಷ ಕಾನನ ಕೊಡುಗೆದಾರರು** ಎಂದು ಗುರುತಿಸಿ **ಕಾನನ ಸಿರಿ ಲೇಖನ ಸ್ಪರ್ಧೆ ಮತ್ತು ಕಾನನ ಕೂಟ 2026**ರ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಕಾನನ ತಂಡವು ನನ್ನ ಕವನಗಳನ್ನು ಗುರುತಿಸಿ ಕೊಡುಗೆದಾರನಾಗಿ ಸ್ವೀಕರಿಸಿ ಕಾರ್ಯಕ್ರಮದಲ್ಲಿ ಸನ್ಮಾನಿಸಿದ್ದು ನನ್ನ ಜೀವನದಲ್ಲೊಂದು ಮರೆಯಲಾಗದ ಕ್ಷಣವಾಗಿದೆ. ಇದರ ಬಗ್ಗೆ ನಾನು ಎಂದು ಯೋಚಿಸಿರಲಿಲ್ಲ ಹಾಗೂ ಊಹಿಸಿರಲಿಲ್ಲ. ಕಾನನ ಬಳಗಕ್ಕೆ ನನ್ನ ತುಂಬು ಹೃದಯದಿಂದ ಕೃತಜ್ಞತೆಯನ್ನು ಹೇಳಬಯಸುತ್ತೇನೆ.

- **ಕೃಷ್ಣ ನಾಯಕ್**



**ಜೈಕುಮಾರ್ ಆರ್.**

ಹಲವಾರು ವರ್ಷಗಳಿಂದ ಕಾನನ ಪತ್ರಿಕೆಯಲ್ಲಿ ಪ್ರತೀ ತಿಂಗಳು ಪ್ರಕಟವಾಗುತ್ತಿರುವ ಕಾನನ ಪತ್ರಿಕೆಯ **ವಿದ್ಯಾರ್ಥಿಗಾಗಿ ವಿಜ್ಞಾನ** ಎಂಬ ಅಂಕಣದ ಲೇಖಕರಾದ ಇವರು ಇಂಜಿನಿಯರಿಂಗ್ ಪದವಿಯನ್ನು ಹೊಂದಿದ್ದಾರೆ. ಫೆಬ್ರವರಿ 2016ರಲ್ಲಿ ಕಾನನ ಪತ್ರಿಕೆಗೆ ತಮ್ಮ ಮೊದಲ ಲೇಖನವನ್ನು ಕೊಡಲು ಶುರುಮಾಡಿದ ಇವರು ಇಲ್ಲಿಯ ತನಕ 117 ಲೇಖನಗಳನ್ನು ನೀಡಿದ್ದಾರೆ. ತಮ್ಮ ಜೀವನದಲ್ಲಿ ನಡೆಯುವ ಘಟನೆಗಳನ್ನೇ ಆಧಾರವಾಗಿಟ್ಟುಕೊಂಡು ವಿಜ್ಞಾನದ ಹೊಸ ಅಚ್ಚರಿಯ ಆವಿಷ್ಕಾರಗಳನ್ನು ಸಾಮಾನ್ಯ ಓದುಗರಿಗೆ, ವಿದ್ಯಾರ್ಥಿಗಳಿಗೆ ಲೇಖನದ ಮುಖೇನ ತಿಳಿಸುವುದು ಇವರ ವಿಶೇಷತೆ. ತಮ್ಮ ಸುಲಭ ಭಾಷೆಯಲ್ಲಿಯೇ ಎಷ್ಟೋ ಗಾಢವಾದ ವಿಚಾರಗಳನ್ನು ತಿಳಿಸುತ್ತಾ ಬಂದಿದ್ದಾರೆ. ಇವರ ಈ ಅವಿರತ ಸೇವೆಗೆ ಇವರನ್ನು ತಂಡವು **ವಿಶೇಷ ಕಾನನ ಕೊಡುಗೆದಾರರು** ಎಂದು ಗುರುತಿಸಿ **ಕಾನನ ಸಿರಿ ಲೇಖನ ಸ್ಪರ್ಧೆ ಮತ್ತು ಕಾನನ ಕೂಟ** 2026ರ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಕನ್ನಡದಲ್ಲಿ ಹೊರಬರುವ ಪರಿಸರ ಲೇಖನಗಳನ್ನು ಒಳಗೊಂಡ ಇ-ಮಾಸಿಕ ಕಾನನ. ಇದರಲ್ಲಿನ ವಿದ್ಯಾರ್ಥಿಗಾಗಿ ವಿಜ್ಞಾನ ಅಂಕಣದಲ್ಲಿ ಕೆಲ-ಹಲವು ಲೇಖನಗಳಲ್ಲಿ ನನ್ನ ಅನುಭವ ಸಹಿತ ಅನುವಾದಾಕ್ಷರಗಳನ್ನು ಚುಮುಕಿಸಲು ಕಾನನ ತಂಡ ಸುದೀರ್ಘ ಹತ್ತು ವರ್ಷಗಳ ಅವಕಾಶವನ್ನು ನೀಡಿದೆ. ಅದನ್ನು ಅಷ್ಟೇ ನಿಷ್ಠೆಯಿಂದ ಬಳಸಿಕೊಂಡೆ ಎಂದು ಭಾವಿಸುತ್ತೇನೆ. ನನ್ನ ಕಾನನ ಲೇಖನಗಳ ಜೊತೆಗಿನ ಈ ದಶಕದ ಪಯಣ ಅತ್ಯಂತ ವಿಭಿನ್ನ ಅನುಭವ ಮತ್ತು ಸಂತಸವನ್ನು ತಂದಿದೆ. ಜೊತೆಗೆ ಮೊನ್ನೆಯ ಕಾನನ ಕೂಟದಲ್ಲಿ ಅದನ್ನು ಪರಿಗಣಿಸಿ ಸನ್ಮಾನಿಸಿದ್ದಕ್ಕೆ ಇಡೀ ಕಾನನ ತಂಡಕ್ಕೆ ನನ್ನ ಅನುವಾದ ರಹಿತ ಧನ್ಯವಾದಗಳನ್ನು ತಲುಪಿಸಲು ಇಚ್ಛಿಸುತ್ತೇನೆ.

- **ಜೈಕುಮಾರ್ ಆರ್.**





ಲೇಖನ: ಸಮತ ಸೀತಾರಾಮ್

ಬೆಂಗಳೂರು ಜಿಲ್ಲೆ


© WCG






WCG
‘ಕಾನನ ಸಿರಿ’ ಲೇಖನ
ಪ್ರಶಸ್ತಿ ಪ್ರಧಾನ ಸಮಾರಂಭ
ಮತ್ತು ಕಾನನ
ಜನವರಿ
ಸೋಮವಾರ
26
ಗಾಂಧಿ ಹಟ್, ಕರ್ನಾಟಕ
ಕುಮಾರ ಕೃಪಾ ರಸ್ತೆ,






# ಕರಿಮತ್ತಿ

**Black Murdah**

*Terminalia crenulata*

ಟರ್ಮಿನಾಲಿಯಾ ಕ್ರೆನುಲಾಟಾ (Terminalia crenulata) ಮರವನ್ನು ಸಾಮಾನ್ಯವಾಗಿ ಕರಿಮತ್ತಿ ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ. ಬೇಸಿಗೆಯಲ್ಲಿ ಎಲೆ ಉದುರಿಸಿ ಬೋಳಾಗಿ ಕಾಣುವ ಈ ಮರ ಭಾರತ, ಶ್ರೀಲಂಕಾ, ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಕರ್ನಾಟಕದ ಕೊಡಗು, ಹಾಸನ, ಧಾರವಾಡ, ಮೈಸೂರು, ಬೆಳಗಾವಿ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಾಣಸಿಗುತ್ತದೆ. ಸಮುದ್ರ ಮಟ್ಟದಿಂದ 800-1000 ಮೀಟರ್ ಎತ್ತರ ಇರುವ ಪ್ರದೇಶಗಳಲ್ಲಿ ಬೆಳೆಯುತ್ತದೆ. ಈ ಮರ ಬೆಟ್ಟ ಪ್ರದೇಶಗಳಲ್ಲಿ, ನದಿ ದಡಗಳಲ್ಲಿ, ಹಳ್ಳಗಳ ಬಳಿ ಕಂಡುಬರುತ್ತದೆ. ಇದರ ಕಾಂಡದ ಮೇಲೆ ಇರುವ ಬೂದು ಮಿಶ್ರಿತ ಕಪ್ಪು ಬಣ್ಣದ ತೊಗಟೆಯ ಮೇಲೆ ಮೊಸಳೆಯ ಚರ್ಮದಂತ ಅಡ್ಡಡ್ಡ ಉದ್ದುದ್ದ ಬಿರುಕುಗಳು ಇರುತ್ತವೆ. ಬಲಿತ ಮರದ ಕಾಂಡದ ತಿರುಳು ಕೂಡ ಕಂದು ಬಣ್ಣದಲ್ಲಿ ಇರುತ್ತದೆ. 30 ರಿಂದ 40 ಅಡಿ ಎತ್ತರಕ್ಕೆ ಬೆಳೆಯುವ ಈ ಮರದ ಸುತ್ತಳತೆ ಸುಮಾರು ಮೂರುವರೆ ಮೀಟರ್. ಮಾರ್ಚ್-ಏಪ್ರಿಲ್ ತಿಂಗಳುಗಳಲ್ಲಿ ತನ್ನ ಎಲೆಗಳನ್ನು ಉದುರಿಸಿ ಬೋಳಾಗಿ ಕಾಣುತ್ತದೆ. ಕಾಂಡಕ್ಕೆ ಏನಾದರೂ ಪೆಟ್ಟು ಬಿದ್ದರೆ ಹಳದಿ ಬಣ್ಣದ ಅಂಟು ದ್ರವ ಹೊರಬಂದು ಗಟ್ಟಿಯಾಗುತ್ತದೆ. ಎಲೆಗಳು 12-15 ಸೆಂ. ಮೀ. ಉದ್ದವಿದ್ದು, ಮಾವಿನ ಎಲೆಗಳನ್ನು ಹೋಲಿದರೂ, ಎಲೆಯ ತುದಿ ಸ್ವಲ್ಪ ಅಗಲವಿದ್ದು, ತುದಿ ಚೂಪಾಗಿರದೆ ಮೊಂಡಾಗಿ ಇರುತ್ತದೆ. ಚಿಗುರೆಲೆಗಳ ಮೇಲೆ ರೋಮದಂತಹ ರಚನೆ ಇರುತ್ತದೆ. ಎಲೆಗಳ ತೊಟ್ಟಿನ ಬಳಿ ಎರಡು ಸಣ್ಣ ಗಂತಿಗಳು ಇರುತ್ತವೆ.

ಈ ಮರವು ಜೂನ್ ತಿಂಗಳಲ್ಲಿ ಹೂ ಬಿಡುತ್ತದೆ. ಗೊಂಚಲು ಗೊಂಚಲಾಗಿ ಬಿಡುವ ಇದರ ಹೂ ಗುಚ್ಛದಲ್ಲಿ ದಳಗಳೇ ಇರುವುದಿಲ್ಲ. ಬೆಣ್ಣೆಯಂತಹ ಬಿಳಿ ಬಣ್ಣದ ಹೂಗಳ ಗುಚ್ಛ ಸರದಂತೆ ಕಾಣುತ್ತದೆ. ಪ್ರತಿ ಹೂವಿನಲ್ಲಿ ಐದು ಮೊನಚಾದ ಲೋಬ್ ಗಳು ಇರುತ್ತವೆ. ಪೂರ್ಣವಾಗಿ ಹೂ ಬಿಟ್ಟ ಮರ ಬಹಳ ಸುಂದರವಾಗಿ ಕಾಣುತ್ತದೆ. ಎಳೆಯ ಕಾಯಿಗಳು ಕೆಂಪಗೆ ಇರುತ್ತವೆ. 5 ಸೆಂ. ಮೀ. ಉದ್ದವಿರುವ ಬಲಿತ ಕಾಯಿಗಳು ಹಸಿರು ಬಣ್ಣದಲ್ಲಿ ಇರುತ್ತವೆ. ಪ್ರತಿ ಕಾಯಿಯ ಮೇಲೆ ನಾಲ್ಕು ತೆಳು ರೆಕ್ಕೆಯ ಮಾದರಿಯ ರಚನೆ ಇರುತ್ತದೆ. ಆಗಸ್ಟ್ ತಿಂಗಳಲ್ಲಿ ಹಣ್ಣಾಗಿ ನುಣುಪಾದ ಗಾಢ ಕಂದು ಬಣ್ಣಕ್ಕೆ ತಿರುಗಿ ಸೆಪ್ಟೆಂಬರ್ ತಿಂಗಳಲ್ಲಿ ಕಾಯಿಗಳು ಕೆಳಗೆ ಉದುರುತ್ತವೆ. ಇದರ ಕಾಯಿಗಳು ಸ್ಟಾರ್ ಫ್ರೂಟ್ ನಂತೆ ಕಂಡರೂ ಬಹಳ ನಾರುಯುಕ್ತವಾಗಿರುತ್ತದೆ. ಪ್ರತಿ ಕಾಯಿಯಲ್ಲೂ ಒಂದು ಬೀಜ ಇರುತ್ತದೆ. ಬಿತ್ತನೆ ಮಾಡಿದ ಶೇಕಡ 70 ಕಾಯಿಗಳು ಮೊಳಕೆಯೊಡೆದು ಗಿಡ ಬರುತ್ತವೆ. ಪ್ರತಿ ಕಾಯಿಯಿಂದ ಒಂದು ಗಿಡ ಮೊಳೆಯುತ್ತದೆ.









ಮತ್ತಿ ಮರ ಒಂದು ಬಹಳ ಒಳ್ಳೆಯ ಮೋಪಿನ ಮರ. ಇದರ ಹಲಗೆಗಳನ್ನು ರೈಲು ಹಳಿಯ ಅಟ್ಟೆಗಳಿಗಾಗಿ ಮತ್ತು ವಾಹನ ಲಾರಿಗಳ, ಚಾರ್ಸಿಗಳ ನಿರ್ಮಾಣದಲ್ಲಿ ಬಳಕೆ ಮಾಡುತ್ತಿದ್ದರು. ಕಬ್ಬಿಣದಂತೆ ಗಟ್ಟಿಯಾಗಿರುವ ಈ ಮರದ ತೊಲೆಗಳನ್ನು ಬಾಗಿಲು ಚೌಕಟ್ಟು, ಕಿಟಕಿ ಇತರೆ ಪೀಠೋಪಕರಣಗಳನ್ನು ಮಾಡಲು ಬಳಸುತ್ತಾರೆ. ನೀರು, ಗೆದ್ದಲಿನ ಸಂಪರ್ಕಕ್ಕೆ ಬಾರದೆ ಹೋದರೆ ಈ ಮರದ ತೊಲೆಗಳು 200 ರಿಂದ 300 ವರ್ಷದವರೆಗೂ ಬಾಳಿಕೆ ಬರುತ್ತವೆ. ಬಲಿತ ಮರದ ಸೇಗು ಕಪ್ಪು ಬಣ್ಣ ಇರುತ್ತದೆ.

ಜೇನುಹುಳಗಳಿಗೆ ಮಕರಂದವನ್ನು ಉಣಿಸುವ ಈ ಮರ, ಹಲವು ಪ್ರಭೇದದ ಪಕ್ಷಿಗಳಿಗೆ ಆಶ್ರಯ ನೀಡುತ್ತದೆ.


**ಕರಿಮತ್ತಿಯ ಔಷಧೀಯ ಗುಣಗಳು:**

ಆಯುರ್ವೇದ ಮತ್ತು ಜನಪದ ವೈದ್ಯಕೀಯ ಪದ್ಧತಿಗಳಲ್ಲಿ ಈ ಮರದ ತೊಗಟೆ, ಎಲೆಗಳು ಮತ್ತು ಕಷಾಯವನ್ನು ಅನೇಕ ರೋಗಗಳ ಚಿಕಿತ್ಸೆಗೆ ಬಳಸಲಾಗುತ್ತದೆ. ವೈಜ್ಞಾನಿಕ ಸಂಶೋಧನೆಗಳ ಪ್ರಕಾರ, ಈ ಸಸ್ಯದಲ್ಲಿ ಆಂಟಿ-ಆಕ್ಸಿಡೆಂಟ್ ಮತ್ತು ಆಂಟಿ-ಮೈಕ್ರೋಬಿಯಲ್ ಗುಣಗಳು ಇವೆ. ತೊಗಟೆಯಿಂದ ತೆಗೆದ ಸಾರವು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ಬೆಳವಣಿಗೆಯನ್ನು ತಡೆಹಿಡಿಯುವ ಸಾಮರ್ಥ್ಯ ಹೊಂದಿದೆ ಎಂದು ಅಧ್ಯಯನಗಳು ತಿಳಿಸಿವೆ. ಇದರಿಂದ ಗಾಯಗಳು, ಚರ್ಮದ ಸೋಂಕುಗಳು ಮತ್ತು ಉರಿಯೂತ ಸಂಬಂಧಿತ ಸಮಸ್ಯೆಗಳಲ್ಲಿ ಇದು ಉಪಯುಕ್ತವಾಗುತ್ತದೆ.

ಇದಲ್ಲದೆ, ಟರ್ಮಿನಾಲಿಯಾ ಜೀನಸ್ ಮೇಲೆ ನಡೆದ ಸಮಗ್ರ ವೈಜ್ಞಾನಿಕ ವಿಮರ್ಶೆಗಳು, ಈ ವರ್ಗದ ಸಸ್ಯಗಳು ಯಕೃತ್ತು ರಕ್ಷಣೆ, ಉರಿಯೂತ ಕಡಿತ, ಜೀರ್ಣಕ್ರಿಯೆ ಸುಧಾರಣೆ ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸುವ ಗುಣಗಳನ್ನು ಹೊಂದಿವೆ ಎಂದು ಸ್ಪಷ್ಟಪಡಿಸಿವೆ. ಟರ್ಮಿನಾಲಿಯಾ ಕ್ರೆನುಲಾಟಾ (ಕರಿಮತ್ತಿ) ಕೂಡ ಇದೇ ಗುಣಗಳನ್ನು ಹೊಂದಿದ್ದು, ಪರಂಪರೆಯಿಂದ ಅತಿಸಾರ, ಹೊಟ್ಟೆನೋವು, ಬಾಯಿ ಮತ್ತು ಹಲ್ಲುಮೂಳೆ ಸಮಸ್ಯೆಗಳಿಗೆ ಬಳಸಲಾಗುತ್ತಿದೆ. ಈ ಮರದ ತೊಗಟೆಯಲ್ಲಿ ಕ್ಯಾಟೆಚಿನ್, ಟ್ಯಾನಿನ್ ಮತ್ತು ಫಿನಾಲಿಕ್ ಇದ್ದು, ಇವು ದೇಹದಲ್ಲಿನ ಹಾನಿಕಾರಕ ಕಣಗಳನ್ನು ನಾಶಮಾಡುವ ಮೂಲಕ ಆರೋಗ್ಯವನ್ನು ಕಾಪಾಡಲು ಸಹಾಯ ಮಾಡುತ್ತವೆ.

**ಲೇಖನ: ಕೆ. ಪಿ. ಶಂಕರಪ್ಪ**
**ಶಾಂತಮ್ಮ ಎಸ್.**
ಬೆಂಗಳೂರು ಜಿಲ್ಲೆ

# ವನಬಂಧ – 09




**ಎಡದಿಂದ ಬಲಕ್ಕೆ**

1. ಶ್ಯಾಮಲ ವರ್ಣದ ಹಕ್ಕಿಯ ಹಿಂಭಾಗದಲ್ಲಿ ಬಿಳಿ ಬಣ್ಣವೂ ಇದೆ (2)
2. ಕೆಂಪು ಕೊಕ್ಕಿನ ಈ ಹಕ್ಕಿಗೆ ಕೆರೆ ದಂಡೆಗಳ ಹುಲ್ಲು ಪೊದೆಗಳಲ್ಲಿ ಮೊಟ್ಟೆ ಇಡುವುದೇ ಸಂಭ್ರಮ (3)
3. ಮುತ್ತುಗಳನ್ನು ಹುಡುಕಲು ಹತ್ತಿ ಹತ್ತಿ ಹೋಗಬೇಕಿರುವ ಈ ಊರು ಕಾವೇರಿ ದಡದಲ್ಲಿದೆ (3)
4. ಗರುಡವೊಂದು ಗಹನವಾಗಿ ಗಾಳಿಯಲ್ಲಿ ತೇಲಾಡಲು ಈ ಜಾಗ ಸೂಕ್ತ (3)
5. ಜೇಬಿನಲ್ಲೂ ಬೀಡು ಬಿಡಬಲ್ಲ ಜೀವಿ (2)

6. ಬಿದಿರು ಹಾಗೂ ಮರದಿಂದ ಜೀವ ಪಡೆವ ಈ ವಸ್ತು ಒದಲು ಹಾಗೂ ಬರೆಯಲು ಉಪಯುಕ್ತ (3)
7. ಅಮೇಝೂನ್, ಕಾಂಗೋ ಮುಂತಾದ ಅಗಾಧ ಜಲರಾಶಿಗಳನ್ನು ಹೀಗೂ ಕರೆಯಬಹುದು (4)
8. ಗಜರಾಜನ ಹೆಸರಿಗೊಂದು ಕಲ್ಲು ಸುತ್ತಿಕೊಂಡಿರುವ ಈ ಊರು ಬೆಂಗಳೂರಿನ ಆಸುಪಾಸಿನಲ್ಲಿ ಬಲು ಜನಪ್ರಿಯ. (4)

**ಮೇಲಿನಿಂದ ಕೆಳಕ್ಕೆ**

1. ಇವರಿಗೆ ಮರವನ್ನು ಕುಟ್ಟುವುದೊಂದೇ ಕಾಯಕ (5)
2. ಅಕ್ಕಿಯು ಹುಟ್ಟುವ ಮುನ್ನ ಈ ಹಂತದಲ್ಲಿ ಇರುತ್ತದೆ. (2)
3. ಮುತ್ತಿಗೆ ಹಾಕಬಹುದೇ ಈ ಮರದ ಹೂವುಗಳು (3)
4. ಯಾವಾಗಲೂ ಎತ್ತರದಲ್ಲೇ ಹಾರಾಡುವ ರೂಢಿ ಇರುವ ಹಕ್ಕಿ ಆದರೆ ಗಾರುಡಿಯಲ್ಲ (3)
5. ಸದಾ ಗುಂಯ್ ಗುಡುವ ಈ ಜೀವಿಗಳ ಮನೆ ತುಂಬಾ ಸಿಹಿ ಸಿಹಿ (4)
6. ನಮ್ಮೆಲ್ಲರ ಅಚ್ಚುಮೆಚ್ಚಿನ ಕನ್ನಡದ ಪರಿಸರ ಮಾಸಿಕ ಪತ್ರಿಕೆ (3)
7. ಮುದ್ದಾದ ಈ ಆನೆಗೆ ಬಲು ಸೊಕ್ಕು (3)
8. ಮೈತುಂಬಾ ಕೂದಲು ತುಂಬಿರುವ ಪ್ರಾಣಿ (3)

**ಕಾನನ ವನಬಂಧ - 08 (ಜನವರಿ - 2026) ಉತ್ತರಗಳು:**

**ಎಡದಿಂದ ಬಲಕ್ಕೆ:**

1. ಚಿಟ್ಟೆ 2. ರಣಹದ್ದು 3. ಒರತೆ 4. ಕಬಿನಿ 5. ಹಾತೆ 6. ರಾಮದಾಸ 7. ಮಡಿವಾಳ 8. ಗುಳುಮುಳುಕ

**ಮೇಲಿನಿಂದ ಕೆಳಗೆ:**

1. ಮಂಗಟ್ಟೆ 2. ಚಿರತೆ 3. ಹಕ್ಕಿ 4. ಕಳ್ಳಿಪೀರ 5. ಹಾವುರಾಣಿ 6. ದಾಸವಾಳ 7. ಮರಗುಬ್ಬಿ 8.ಕಪಿಲ

**"ಈ ಮೇಲಿನ ವನಬಂಧವನ್ನು ಉತ್ತರಿಸಿ ನಮ್ಮ ವಿಳಾಸಕ್ಕೆ ಇದೇ ತಿಂಗಳ ದಿನಾಂಕ 20ರ ಒಳಗೆ ಕಳುಹಿಸಿ ಕೊಟ್ಟವರಿಗೆ ಪುಟ್ಟ ಬಹುಮಾನ ನೀಡಲಾಗುವುದು. (ಇ-ಮೇಲ್ ವಿಳಾಸಕ್ಕಾಗಿ ನೀವೂ ಕಾನನಕ್ಕೆ ಬರೆಯಬಹುದು ಅಂಕಣವನ್ನು ಒದಿ)"**

**ವನಬಂಧ: ಸುಬ್ಬು ಬಾದಲ್**

ಬೆಂಗಳೂರು ಜಿಲ್ಲೆ



ವಿವಿ ಅಂಕಣ

# ಪರೋಪಕಾರಿ ಹಿಮಕರಡಿ...

ನನಗಿನ್ನೂ ನೆನಪಿದೆ. ಹೊಲದಲ್ಲಿ ಅಜ್ಜಿ ಸುಮ್ಮನೆ ಕೂರದೆ ಏನೋ ಒಂದು ಕೆಲಸ ಮಾಡುತ್ತಿದ್ದರು. ಸಣ್ಣ ಸಣ್ಣ ಬಂಡೆ ಕಲ್ಲುಗಳಿಂದ ಕೂಡಿದ್ದ ಜಾಗದಲ್ಲೂ ಸಹ ಮಣ್ಣನ್ನು ತೋಡಿ ಹೂವಿನ ಬೀಜ, ಅರಳಿನ ಬೀಜ, ಮರಗೆಣಸು ಹೀಗೆ ಯಾವುದು ಸಾಧ್ಯವೋ ಅದನ್ನು ಬೆಳೆಯಲು ಶ್ರಮಿಸುತ್ತಿದ್ದರು. ಹಾಗೊಮ್ಮೆ ಕೆಲಸ ಮಾಡುವಾಗ, ಹೊಲದಲ್ಲಿ ಕೆಲಸ ಮಾಡುತ್ತಿದ್ದ ಎಲ್ಲರಿಗೂ ಊಟ ತೆಗೆದುಕೊಂಡು ಹೋಗುವ ಕೆಲಸ ನನಗೆ ಬಂತು. ನಾನೂ ತೆಗೆದುಕೊಂಡು ಹೋದೆ. ತೆಗೆದುಕೊಂಡು ಹೋದ ಸ್ವಲ್ಪ ಸಮಯದ ನಂತರ ಎಲ್ಲರೂ ಊಟಕ್ಕೆ ಕುಳಿತರು. ಅದರಲ್ಲಿ ಅಕಸ್ಮಾತಾಗಿ ನನ್ನ ಅಜ್ಜಿಯ ಊಟದ ಶೈಲಿಯನ್ನು ಸುಮ್ಮನೆ ಹಾಗೆ ಗಮನಿಸುತ್ತಿದ್ದೆ. ಅವರಿಗೆ ಅನ್ನಕ್ಕಿಂತ ಮುದ್ದೆ ಎಂದರೆಯೇ ಅಚ್ಚು ಮೆಚ್ಚು. ಮುದ್ದೆ-ಸಾರು ಹಾಕಿಸಿಕೊಂಡು ನಂತರ ಇನ್ನೇನು ಊಟ ಶುರು ಮಾಡುತ್ತಾರೆ ಎನ್ನುವಷ್ಟರಲ್ಲಿ ಒಂದು ತುತ್ತು ಮುದ್ದೆ ಮುರಿದು ಹಣೆಯ ಬಳಿ ಹಿಡಿದು, ಯಾವುದೋ ದೇವರನ್ನು ನೆನೆದು ತಟ್ಟೆಯ ಬದಿಯಲ್ಲಿ ಇಟ್ಟರು. ಆ ನಂತರ ಅವರು ಊಟ ಮಾಡಲು ಶುರು ಮಾಡಿದರು. ಇದನ್ನೆಲ್ಲಾ ನೋಡುತ್ತಿದ್ದ ನನಗೆ ಕುತೂಹಲ; ಅದಕ್ಕೇ ಕೇಳಿಬಿಟ್ಟೆ. ಅದಕ್ಕೆ ಅಜ್ಜಿ ಅಂದಳು 'ಯಾವ್ದೋ ನಾಯಿನೋ, ಕಾಗೆನೋ ತಿಂತದೆ ಮಗ'



ಅಂದರು. ಆದರೂ ಇಷ್ಟು ಆಹಾರ ಅವಕ್ಕೆ ಸಾಕೇ? ಎಂಬ ಪ್ರಶ್ನೆ ಅಂದು ನನ್ನ ತಲೆಯಲ್ಲಿಯೇ ಉಳಿಯಿತು. ಈಗ ಅನ್ನಿಸುತ್ತದೆ; ಸಾಕಾಗಬಹುದು, ಏಕೆಂದರೆ ಹೀಗೆ ಮಾಡುತ್ತಿದ್ದದ್ದು ಕೇವಲ ನನ್ನ ಅಜ್ಜಿ ಮಾತ್ರವಲ್ಲ, ನನ್ನ ತಾತ, ಅಪ್ಪ, ಅಮ್ಮ ಊಟ ಮಾಡುವ ಮುನ್ನ ಒಂದು ತುತ್ತು ತಟ್ಟೆಯ ಬದಿಗಿಟ್ಟು ದೇವರನ್ನು ನೆನೆದು ಊಟ ಶುರು ಮಾಡುತ್ತಿದ್ದರು. ಈಗ ನನ್ನ ಅಪ್ಪ-ಅಮ್ಮರ ಈ ಹವ್ಯಾಸ ಕಾಲಕ್ಕೆ ತಕ್ಕಂತೆ ಬದಲಾಗಿಬಿಟ್ಟಿದೆ ಎದು ಕಾಣುತ್ತದೆ. ಆದರೆ ಅಂದಿನ ಈ ಅಭ್ಯಾಸ ಒಂದೆರಡು ಜೀವಿಗೆ ತನ್ನ ಆಹಾರ ಒದಗಿಸುವಲ್ಲಿ ನೆರವಾಗುತ್ತಿತ್ತು ಎನ್ನುವುದು ನಾವಿಲ್ಲಿ ಗಮನಿಸಬೇಕಾದ ವಿಚಾರ. ಅದರ ಜೊತೆಗೆ ನನ್ನ ಚಿಕ್ಕ ವಯಸ್ಸಿನಲ್ಲಿ ಅಮ್ಮ ಸಗಣಿಯಿಂದ ಸಾರಿಸುತ್ತಿದ್ದ ನಮ್ಮ ಹಳೆ ಮನೆಯ ಬಾಗಿಲಲ್ಲಿ ಕಾಲಕಾಲಕ್ಕೆ ಕಪ್ಪು ಇರುವೆಗಳು ಬರುತ್ತಿದ್ದವು. ಅದಕ್ಕೆ ಅಮ್ಮ ಅವುಗಳ ಗೂಡಿನ ಬಳಿ ಸ್ವಲ್ಪ ಸಕ್ಕರೆ ಹಾಕಿ ಹೀಗೆನ್ನುತ್ತಿದ್ದರು 'ಇವು ಕಚ್ಚಲ್ಲ ಮಗಾ, ದೇವರ ಇರುವೆ ಇವು'. ಇವರ ನಂಬಿಕೆಗಳ ಪರಿ ಬೇರೆ ಬೇರೆಯಾದರೂ ಉದ್ದೇಶ ಮಾತ್ರ ಇನ್ನೊಂದು ಜೀವಿಗೆ ತನ್ನ ಕೈಲಾದ ಸಹಾಯ ಮಾಡುವುದಾಗಿತ್ತು. ಇದನ್ನು ನೆನೆಸಿಕೊಂಡರೆಯೇ, ಕೆಲವು ನಮ್ಮ ನಂಬಿಕೆಗಳು ಮೂಢವಾಗಿ ಕಂಡರೂ ಇನ್ನೊಂದು ಜೀವಿಗೆ ಆಸರೆಯಾಗಿತ್ತು. ನಾವೂ ಇದ್ದೀವಿ ಈಗ...



ಈ ವಿಚಾರ ಈಗ ಇಲ್ಲಿ ಏಕೆ? ಎಂದರೆ, ತಿಳಿದೋ ತಿಳಿಯದೆಯೋ ಆರ್ಕಟಿಕ್ ನಲ್ಲಿ ಕಾಣುವ ಹಿಮಕರಡಿಯೂ ಸಹ ಹೀಗೆ ತಾನು ಬೇಟೆಯಾಡಿದ ಪ್ರಾಣಿಯ ಶೇಕಡಾ 30 ಭಾಗವನ್ನು ಬೇರೆ ಜೀವಿಗಳು ತಿನ್ನಲಿಕ್ಕೆ ಹಾಗೇ ಬಿಟ್ಟು ಹೋಗುತ್ತವಂತೆ. ಇವುಗಳ ಈ ಅಭ್ಯಾಸದಿಂದ ಅಲ್ಲಿನ ತೀಕ್ಷ್ಣ ವಾತಾವರಣದಲ್ಲಿ ಬೇಟೆಯಾಡಲು ಕಷ್ಟಪಡುವ ಎಷ್ಟೋ ಜೀವಿಗಳು ಇದರ ಪ್ರಯೋಜನ ಪಡೆದು ತಮ್ಮ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿವೆಯಂತೆ. ಹಿಮಕರಡಿಗಳು ಗೊತ್ತಿಲ್ಲದೇ ಮಾಡುವ ಈ ಕೆಲಸದಿಂದ ಕೆಲವು ಲಕ್ಷ ಕೆ. ಜಿ. ಗಳಷ್ಟು ಆಹಾರವನ್ನು ಪರ ಜೀವಿಗಳಿಗೆ ಇವುಗಳು ಒದಗಿಸುತ್ತಿವೆ ಎಂದು ಹೇಳುತ್ತದೆ ಈಗ ಹೇಳಲು ಹೊರಟಿರುವ ಸಂಶೋಧನೆ.

ಇದರ ಅನುಸಾರ ಹೇಳುವುದಾದರೆ ಸುಮಾರು 1930 ರಿಂದಲೂ ಮಾಡಿರುವ ಗಮನಿಕೆಗಳನ್ನು ಪರಿಗಣಿಸಿ ಹೇಳುವುದಾದರೆ ಹಿಮಕರಡಿಗಳು ತಾವು ಬೇಟೆಯಾಡಿದ ಒಂದಷ್ಟು ಭಾಗವನ್ನು ತಿನ್ನದೆ ಹಾಗೇ ಬಿಟ್ಟು ಹೋಗುತ್ತವೆ ಎಂದು ತಿಳಿದಿತ್ತು. ಆದರೆ ಅದರ ಬಗ್ಗೆ ನಿಖರವಾಗಿ ಅಧ್ಯಯನ ಮಾಡುವ ಪ್ರಯತ್ನ ಯಾರೂ ಮಾಡಿರಲಿಲ್ಲ. ಆಗ ಮುಂದೆ ಬಂದದ್ದು ನಿಕೊಲಸ್ ಪಿಲ್ ಫ಼ೊಲ್ಡ್ ಎನ್ನುವ ಮಾಂಸಾಹಾರಿ ಪ್ರಾಣಿ ಶಾಸ್ತ್ರಜ್ಞ. ಇವರು ಆರ್ಕಟಿಕ್ ನಲ್ಲೇ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಹಿಮಕರಡಿಗಳ ಚಲನವಲನವನ್ನು ಗಮನಿಸುತ್ತಿದ್ದ ಅವರು ಹೀಗೆ ಗಮನಿಸುವಾಗ ಅವುಗಳ ಆಹಾರ

ಶೈಲಿಯನ್ನು ಸಂಶೋಧನೆಯಾಗಿ ಮಾಡಲು ಮುಂದಾದರು. ಅದರಲ್ಲಿ ಅವರು ಗಮನಿಸಿದ್ದು, ಹಿಮ ಕರಡಿಗಳು ಹೆಚ್ಚಾಗಿ ಬೇಟೆಯಾಡುವುದು ಸೀಲ್ ಗಳನ್ನು. ಜೊತೆಗೆ ವರ್ಷದ ಒಂದು ಸಮಯದಲ್ಲಿ ಮಾತ್ರ ಸ್ವಲ್ಪ ಹೆಚ್ಚಾಗಿ ಬೇಟೆಯಾಡುತ್ತವೆಯಂತೆ. ಅಂದರೆ ಸುಮಾರು 3-5 ದಿನಕ್ಕೊಮ್ಮೆ ಒಂದು ಸೀಲ್ ಅನ್ನು ಬೇಟೆಯಾಡುವುದು. ಅಂದರೆ ಒಂದು ಸಾಮಾನ್ಯ ಹಿಮಕರಡಿ ಬೇಟೆಯಾಡಿ 70% ಭಾಗ ತಿಂದು 30% ಭಾಗ ಬಿಟ್ಟು ಹೋಗುವುದಾದರೆ, ವರ್ಷಕ್ಕೆ ಸುಮಾರು 1000 ಕೆ. ಜಿ. ಆಹಾರವನ್ನು ಹಿಂದೆ ಬಿಟ್ಟು ಬೇರೆ ಜೀವಿಗೆ ನೆರವಾದಂತೆ ಆಯಿತು. ಆರ್ಕಟಿಕ್ ನಲ್ಲಿ ಸುಮಾರು 26000 ಹಿಮಕರಡಿಗಳನ್ನು ಗುರುತಿಸಲಾಗಿದೆ ಅಂದರೆ ಅದರ ಅನುಸಾರ ವರ್ಷಕ್ಕೆ 300 ಕೆ. ಜಿ. ಆಹಾರ ಒಂದು ಕರಡಿ ಬಿಡುವುದಾದರೆ ಎಲ್ಲಾ ಸೇರಿ ಬೇರೆ ಜೀವಿಗಳು ಬದುಕಲು ಸುಮಾರು 78 ಲಕ್ಷ ಕೆ. ಜಿ. ಗಳಷ್ಟು ಆಹಾರವನ್ನು ಈ ಹಿಮಕರಡಿಗಳೇ ಒದಗಿಸಿದಂತಾಯಿತು.




ಇದರ ಪ್ರಯೋಜನ ಪಡೆಯುವವರಲ್ಲಿ ಆರ್ಕಟಿಕ್ ನರಿ, ಗಲ್ ಪಕ್ಷಿಗಳು, ಕಾಗೆ ಜಾತಿಯ(ರೇವನ್ಸ್) ಪಕ್ಷಿಗಳು ಮತ್ತು ಇತರ ಹಿಮಕರಡಿಗಳೂ ಆಗಿವೆಯಂತೆ. ಆದರೆ ಇಲ್ಲಿ ಜಾಗತಿಕ ತಾಪಮಾನದಿಂದ ಕ್ಷೀಣಿಸುತ್ತಿರುವ ಹಿಮ ಹಾಗೂ ಆಹಾರ ಒದಗಿಸುವ ದೈತ್ಯ ಹಿಮಕರಡಿಗಳ ಸಂಖ್ಯೆಯೂ ಕ್ಷೀಣಿಸುತ್ತಿರುವುದು ಚಿಂತಿಸಬೇಕಾದ ವಿಷಯ. ಇದರ ಪರಿಣಾಮವಾಗಿ ವಿಜ್ಞಾನಿಗಳ ಲೆಕ್ಕದ ಪ್ರಕಾರ ಸುಮಾರು 3,23,000 ಕೆ. ಜಿ. ಯಷ್ಟು ಇಂತಹ ಆಹಾರ ಪ್ರತೀ ವರ್ಷ ಕ್ಷೀಣಿಸುತ್ತಿದೆಯಂತೆ. ಅದರ ನೇರ ಪರಿಣಾಮ ಅಲ್ಲಿ ಇದನ್ನೇ ನಂಬಿಕೊಂಡು ಬದುಕುತ್ತಿರುವ ಎಷ್ಟು ಜೀವಿಗಳ ಮೇಲೆ ಬೀರುತ್ತದೆಂದು ನೀವೇ ಊಹಿಸಿ.



ಇದನ್ನೆಲ್ಲಾ ಕೇಳಿದ ಮೇಲೆ ಇದೊಂದು ವೈಜ್ಞಾನಿಕ ವಿಚಾರವಷ್ಟೇ ಎಂದು ಬಿಡದೇ, ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ, ಪ್ರಾಣಿಗಳೇ ತಮಗೆ ತಿಳಿದೋ ತಿಳಿಯದೆಯೋ ಬೇರೊಂದು ಜೀವಿಗೆ ಆಸರೆಯಾಗುತ್ತಿರುವಾಗ, 'ಪರೋಪಕಾರಾರ್ಥಂ ಇದಂ ಶರೀರಂ' ಎಂಬ ಮಂತ್ರವನ್ನು ಜಪಿಸುವ ನಾವು ನಮ್ಮ ನಡವಳಿಕೆಗಳಲ್ಲಿ ಇತರ ಜೀವಿಗಳ ಬದುಕನ್ನು ಗೌರವಿಸುವ ಗುಣಗಳು ಎಷ್ಟಿರಬೇಕು? ಒಂದೇ ಒಂದು ಬಾರಿ ಯೋಚಿಸಿ ನೋಡೋಣ.

**Source:** www.snexplores.org



**ಲೇಖನ: ಜೈಕುಮಾರ್ ಆರ್.**

ಬೆಂಗಳೂರು ನಗರ ಜಿಲ್ಲೆ

# ಇರುವೆ



ಇರುವೆ ಇರುವೆ ಹೇಗಿರುವೆ
ಸಿಹಿಯನು ಹುಡುಕುತ ಎಲ್ಲಿರುವೆ
ಅಡುಗೆ ಮನೆಯ ಸಕ್ಕರೆ ಡಬ್ಬಿಯ
ತೆಗೆದರೆ ಅದರ ಒಳಗಿರುವೆ

ಇರುವೆ ಇರುವೆ ಸಾಲಿರುವೆ
ಕಬ್ಬಿನ ರಸಕೆ ಮುತ್ತಿರುವೆ
ಸಾಲು ಸಾಲು ಸೈನಿಕರಂತೆಯೆ
ಶಿಸ್ತೊಳಗೆಲ್ಲೆಡೆ ನಡೆದಿರುವೆ

ಇರುವೆ ಇರುವೆ ಎಲ್ಲಿರುವೆ
ನಿನಗೆ ಬೆಲ್ಲವ ತಂದಿರುವೆ
ಮೆಲ್ಲನೆ ಬಾ ಬಾ ನನ್ನೆಡೆಗೆ
ನಿನ್ನನೆ ನಾನು ಹುಡುಕಿರುವೆ

ಇರುವೆ ಇರುವೆ ಕಪ್ಪಿರುವೆ
ಮೊಟ್ಟೆಯ ನೀನು ಕಚ್ಚಿರುವೆ
ಮೊದಲ ಮಳೆಯ ಸೂಚನೆಯ
ನೀನೆ ನನಗೆ ತಿಳಿಸಿರುವೆ

ಇರುವೆ ಇರುವೆ ಕೆಂಪಿರುವೆ
ನಿನ್ನನು ಕೆಣಕಿರೆ ಕಚ್ಚಿರುವೆ
ಯುದ್ದಕೆ ಕಹಳೆ ಊದಿರುವೆ
ನಿನ್ನೆಡೆ ಬರಲು ಹೆದರಿರುವೆ

ಇರುವೆ ಇರುವೆ ಎಲ್ಲಿರುವೆ
ನೋಡಲು ಚಂದವು ಪುಟ್ಟಿರುವೆ
ಕಾಯಕ ಯೋಗಿಯ ಹೊಲದೊಳಗೆ
ಧಾನ್ಯವ ಹೊತ್ತು ಹೊರಟಿರುವೆ.

ಚನ್ನಕೇಶವ ಜಿ. ಲಾಳನಕಟ್ಟೆ
ತುಮಕೂರು ಜಿಲ್ಲೆ

# ಪ್ರಕೃತಿ ಬಿಂಬ



**ನೀಲಿ ಹುಲಿ ಚಿಟ್ಟೆ** © ಗುರುಪ್ರಸಾದ್ ಕೆ. ಆರ್.

ದಕ್ಷಿಣ ಮತ್ತು ದಕ್ಷಿಣ ಆಗ್ನೇಯ ಏಷ್ಯಾದ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳು ಹಾಗೂ ಎಲೆ ಉದುರುವ ಕಾಡುಗಳಲ್ಲಿ ಕಂಡುಬರುವ ಈ ನೀಲಿ ಹುಲಿ ಚಿಟ್ಟೆಯು ನಿಂಫಾಲಿಡೇ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ತಿರುಮಲ ಲಿಮ್ನಿಯಾಸ್ (Tirumala limniace) ಎಂದು ಕರೆಯಲಾಗುತ್ತದೆ. ರೆಕ್ಕೆಗಳ ಮುಂಭಾಗವು ಕಡು ಕಂದು ಅಥವಾ ಕಪ್ಪು ಬಣ್ಣವಿದ್ದು, ಅರೆ ಪಾರದರ್ಶಕವಾದ ಬಿಳಿ ಮಿಶ್ರಿತ ನೀಲಿ ಬಣ್ಣದ ಚುಕ್ಕೆಗಳು ಹಾಗೂ ಗೆರೆಗಳನ್ನು ಹೊಂದಿರುತ್ತದೆ. ಹಿಂಭಾಗವು ಇದೇ ರೀತಿ ಇದ್ದು, ಕೊಂಚ ತೆಳು ಬಣ್ಣದ್ದಾಗಿರುತ್ತದೆ. ಈ ಚಿಟ್ಟೆಗಳು ಮಳೆಗಾಲದಲ್ಲಿ ಪಶ್ಚಿಮ ಘಟ್ಟದಿಂದ ಪೂರ್ವ ಘಟ್ಟಗಳೆಡೆ, ಚಳಿಗಾಲದಲ್ಲಿ ಪೂರ್ವ ಘಟ್ಟಗಳಿಂದ ಪಶ್ಚಿಮ ಘಟ್ಟಗಳೆಡೆ ವಲಸೆ ಹೋಗುವುದನ್ನು ಕಾಣಬಹುದು. ಪೊಯೇಸೀ (Poaceae) ಕುಟುಂಬದ ಕಬ್ಬಿನ ಗಿಡ, ಅಪೊಸಿನೇಸಿ (Apocynaceae) ಕುಟುಂಬದ ಎಕ್ಕದ ಗಿಡ, ಬುಗುಡಿ ಬಳ್ಳಿ, ಮೇಣದ ಬಳ್ಳಿ ಇತ್ಯಾದಿ ಇವುಗಳ ಅತಿಥೇಯ ಸಸ್ಯಗಳಾಗಿವೆ.!



**ಪಟ್ಟೆ ಹುಲಿ** © ಗುರುಪ್ರಸಾದ್ ಕೆ. ಆರ್.

ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳು, ಎಲೆ ಉದುರುವ ಕಾಡುಗಳಲ್ಲಿ ಕಂಡು ಬರುವ ಪಟ್ಟೆ ಹುಲಿ ಚಿಟ್ಟೆಯು ನಿಂಫಾಲಿಡೇ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಡಾನೌಸ್ ಜೆನುಟಿಯಾ (Danaus genutia) ಎಂದು ಕರೆಯಲಾಗುತ್ತದೆ. ರೆಕ್ಕೆಗಳ ಮುಂಭಾಗವು ಕಡು ಕಂದು ಅಥವಾ ಕಪ್ಪು ಬಣ್ಣವಿದ್ದು, ಅರೆ ಪಾರದರ್ಶಕವಾದ ಬಿಳಿ ಮಿಶ್ರಿತ ನೀಲಿ ಬಣ್ಣದ ಚುಕ್ಕೆಗಳು ಹಾಗೂ ಗೆರೆಗಳನ್ನು ಹೊಂದಿರುತ್ತದೆ. ಚಳಿಗಾಲದಲ್ಲಿ ವಲಸೆ ಹೋಗುವುದನ್ನು ಕಾಣಬಹುದು. ಪೊಯೇಸೀ (Poaceae) ಕುಟುಂಬದ ಕಬ್ಬಿನ ಗಿಡ, ಅಪೊಸಿನೇಸಿ (Apocynaceae) ಕುಟುಂಬದ ಎಕ್ಕದ ಗಿಡ, ಬುಗುಡಿ ಬಳ್ಳಿ, ಮೇಣದ ಬಳ್ಳಿ ಇತ್ಯಾದಿ ಇವುಗಳ ಅತಿಥೇಯ ಸಸ್ಯಗಳಾಗಿವೆ.



**ಕಪ್ಪು ಚುಕ್ಕೆ** © ಗುರುಪ್ರಸಾದ್ ಕೆ. ಆರ್.

ಭಾರತೀಯ ಉಪಖಂಡ ಮತ್ತು ದಕ್ಷಿಣ ಆಗ್ನೇಯ ಏಷ್ಯಾದ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡು ಬರುವ ಕಪ್ಪು ಚುಕ್ಕೆ ಚಿಟ್ಟೆಯು ಲೈಕೇನಿಡೆ (Lycaenidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕ್ಯಾಸ್ಟಲಿಯಸ್ ರೋಸಿಮನ್ (Castalius rosimon) ಎಂದು ಕರೆಯಲಾಗುತ್ತದೆ. ಎರಡೂ ಬಿಳಿಯ ರೆಕ್ಕೆಗಳ ಮುಂಭಾಗದ ತಳದಲ್ಲಿ ಹೊಳೆಯುವ ತೆಳು ನೀಲಿಯಿದ್ದು, ಅಂಚುಗಳಲ್ಲಿ ಮತ್ತು ಒಳಭಾಗದಲ್ಲಿ ಕಪ್ಪು ತೇಪೆಗಳನ್ನು ಕಾಣಬಹುದು. ಹಿಂಭಾಗವು ಬಿಳಿಯ ಬಣ್ಣವಿದ್ದು, ಕಪ್ಪು ಚುಕ್ಕೆ ಮತ್ತು ಗೆರೆಗಳನ್ನು ಹೊಂದಿರುತ್ತದೆ. ನೆಲದ ಸಮೀಪ ಹಾರಾಡುತ್ತಾ, ಗಿಡಗಳ ಮೇಲೆ ಕುಳಿತಾಗ ರೆಕ್ಕೆಗಳನ್ನು ಅರ್ಧ ತೆರೆದು ಬಿಸಿಲನ್ನು ಕಾಯುತ್ತದೆ. ರಾಮ್ನೇಸಿ (Rhamnaceae) ಕುಟುಂಬದ ಬೋರೆ ಹಣ್ಣಿನ ಮರದ ಜಾತಿಗೆ ಸೇರಿದ ವಿವಿಧ ಸಸ್ಯಗಳು ಇವುಗಳ ಅತಿಥೇಯ ಸಸ್ಯಗಳಾಗಿವೆ.




**ಸಾಮಾನ್ಯ ಹುಲಿ ಚಿಟ್ಟೆ** © ಗುರುಪ್ರಸಾದ್ ಕೆ. ಆರ್.

ಏಷ್ಯಾ, ಆಸ್ಟ್ರೇಲಿಯಾ ಮತ್ತು ಆಫ್ರಿಕಾದ ಶುಷ್ಕ, ತೆರೆದ ಪ್ರದೇಶಗಳಲ್ಲಿ ಮತ್ತು ಮರುಭೂಮಿಗಳು, ಪರ್ವತಗಳು, ಎಲೆ ಉದುರುವ ಕಾಡುಗಳು, ನಗರಗಳು ಮತ್ತು ಉದ್ಯಾನವನಗಳಲ್ಲಿ ಕಂಡು ಬರುವ ಈ ಸಾಮಾನ್ಯ ಹುಲಿ ಚಿಟ್ಟೆಯು ನಿಂಫಾಲಿಡೇ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಡಾನೌಸ್ ಕ್ರಿಸಿಪಸ್ (Danaus chrysippus) ಎಂದು ಕರೆಯಲಾಗುತ್ತದೆ. ದೇಹವು ಕಪ್ಪು ಬಣ್ಣದ್ದಾಗಿದ್ದು, ಬಿಳಿ ಚುಕ್ಕೆಗಳನ್ನು ಹೊಂದಿರುತ್ತದೆ. ರೆಕ್ಕೆಗಳು ಕಂದು ಮಿಶ್ರಿತ ಕಿತ್ತಳೆ ಬಣ್ಣದಲ್ಲಿದ್ದು, ಮೇಲ್ಭಾಗವು ಕೆಳಭಾಗಕ್ಕಿಂತ ಪ್ರಕಾಶಮಾನವಾಗಿರುತ್ತದೆ. ಮುಂಭಾಗದ ರೆಕ್ಕೆಯ ತುದಿಯ ಅರ್ಧಭಾಗವು ಬಿಳಿ ಪಟ್ಟಿಯೊಂದಿಗೆ ಕಪ್ಪು ಬಣ್ಣದ್ದಾಗಿರುತ್ತದೆ. ಹಿಂಭಾಗದ ರೆಕ್ಕೆಯ ಮಧ್ಯದಲ್ಲಿ ಮೂರು ಕಪ್ಪು ಚುಕ್ಕೆಗಳಿರುತ್ತವೆ. ಅತಿಥೇಯ ಸಸ್ಯಗಳಿಂದ ದೇಹದೊಳಗೆ ಶೇಖರಿಸಿರುವ ವಿಷವು ಪರಭಕ್ಷಕಗಳು ಇವುಗಳನ್ನು ತಿನ್ನಲಾಗದಂತೆ ಮಾಡುತ್ತದೆ. ಹಾಗಾಗಿ ತನ್ನ ಪ್ರಕಾಶಮಾನವಾದ ಬಣ್ಣದಿಂದ ಎಚ್ಚರಿಕೆ ನೀಡುತ್ತದೆ. ಅಪೊಸಿನೇಸಿ (Apocynaceae) ಕುಟುಂಬದ ಎಕ್ಕದ ಗಿಡ, ಮೊರೇಸೀ (Moraceae) ಕುಟುಂಬದ ಕೆಲವು ಅತ್ತಿ ಮರಗಳು ಇತ್ಯಾದಿ ಇವುಗಳ ಅತಿಥೇಯ ಸಸ್ಯಗಳಾಗಿವೆ.

**ಚಿತ್ರ: ಗುರುಪ್ರಸಾದ್ ಕೆ. ಆರ್.**
**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು




ಧರೆಯ ಜೀವದ್ರುವವೆಂದರೆ ನೀರು. ಭೂಮಿಯ ಮೇಲ್ಮೈನ ಶೇಕಡಾ ಎಪ್ಪತ್ತೊಂದು ಭಾಗವನ್ನು ಆವರಿಸಿಕೊಂಡಿರುವ ನೀರು, ಭೂಮಿಯನ್ನು ಜೀವಲೋಕವನ್ನಾಗಿ ರೂಪಿಸಿರುವ ಮೂಲ ಅಂಶವಾಗಿದೆ. ಸಸ್ಯಗಳ ದ್ಯುತಿಸಂಶ್ಲೇಷಣೆಯಿಂದ ಹಿಡಿದು ಮೀನುಗಳು, ಆಮೆಗಳು, ಕಪ್ಪೆಗಳು ಹಾಗೂ ಅನೇಕ ಜಲಚರ ಜೀವಿಗಳ ವಾಸಸ್ಥಳದವರೆಗೆ—ಜೀವನದ ಪ್ರತಿಯೊಂದು ಹಂತದಲ್ಲಿಯೂ ನೀರಿನ ಪಾತ್ರ ಅವಿಭಾಜ್ಯವಾಗಿದೆ. ಪರಿಸರದ ಸಮತೋಲನ ಮತ್ತು ಜೀವಿಗಳ ಅಸ್ತಿತ್ವ ನೀರಿನ ಲಭ್ಯತೆ ಹಾಗೂ ಶುದ್ಧತೆಯ ಮೇಲೆ ಅವಲಂಬಿತವಾಗಿದೆ.

ನೀರು ನೈಸರ್ಗಿಕವಾಗಿ ಮರುಚಕ್ರಣಗೊಳ್ಳುತ್ತಿದ್ದರೂ, ಕುಡಿಯುವ ನೀರಿನ ಲಭ್ಯತೆ ದಿನೇದಿನೇ ಕಡಿಮೆಯಾಗುತ್ತಿರುವುದು ಗಂಭೀರ ಎಚ್ಚರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ನೀರಿನ ಸಂರಕ್ಷಣೆ ಮತ್ತು ಅದರ ಮಹತ್ವದ ಕುರಿತು ಜಾಗೃತಿ ಮೂಡಿಸಲು ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು 1992ರಲ್ಲಿ A/RES/47/193 ನಿರ್ಣಯವನ್ನು ಅಂಗೀಕರಿಸಿ, ಪ್ರತಿ ವರ್ಷ ಮಾರ್ಚ್ 22ನ್ನು **"ವಿಶ್ವ ನೀರಿನ ದಿನ"** ವೆಂದು ಘೋಷಿಸಿದೆ. ಈ ದಿನವು ಕೇವಲ ಆಚರಣೆಯಲ್ಲ, ನಮ್ಮ ನೀರಿನ ಬಳಕೆಯ ಕ್ರಮಗಳನ್ನು ಮರುಪರಿಶೀಲಿಸಿ, ಭವಿಷ್ಯದ ಜೀವಲೋಕಕ್ಕಾಗಿ ಜವಾಬ್ದಾರಿಯುತ ನಡೆಗಳನ್ನು ಅಳವಡಿಸಿಕೊಳ್ಳುವ ಸ್ಮರಣೆ ಕೂಡ ಹೌದು.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com

**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.